4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ವಿಷಯ: ಅ) ನಿಯಮ 69ರಡಿಯಲ್ಲಿ ಸಾರ್ವಜನಿಕ ಮಹತ್ವದ ವಿಷಯಗಳನ್ನು ಪ್ರಸ್ತಾಪಿಸಲು ಅವಕಾಶ ನೀಡುವ ಬಗ್ಗೆ.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ನಮ್ಮ ಶಾಸಕ ಮಿತ್ರರ ಅಹವಾಲೇನೆಂದರೆ, ರೂಲ್ 69 ಅಡಿಯಲ್ಲಿ ಪ್ರಮುಖವಾದ ಸಾರ್ವಜನಿಕ ವಿಷಯಗಳ ಬಗ್ಗೆ ಮಾತನಾಡಲು ಅವಕಾಶ ಕೇಳಿದ್ದೇವೆ. ಕೆಲವು ವಿಷಯಗಳ ಬಗ್ಗೆ ಕಾಲಿಂಗ್ ಅಟೆನ್‌ಷನ್ ಮೂಲಕ ಸಬ್‌ಮಿಟ್ ಮಾಡಿದ್ದೇವೆ. ಆದರೆ, ಆ ವಿಷಯಗಳು ಅಜೆಂಡಾದಲ್ಲಿ ಇವತ್ತೂ ಬಂದಿಲ್ಲ. ಈ ಕೊರಗು ನಮಗೆ ಇದೆ. ಅದರಲ್ಲಿ ಯಾವ ವಿಷಯ ಪ್ರಮುಖವಾದುದೆಂಬುದನ್ನು ತಾವು ಲಿಸ್ಟ್‌ಟ್ ಮಾಡಿ, ಅದನ್ನು ಅಜೆಂಡಾದಲ್ಲಿ ಸೇರಿಸುವುದಕ್ಕೆ ತಮಗೆ ಡಿಸ್ಕ್ರಿಷನ್ ಇದೆ. ನಾವು ತಮ್ಮ ಛೇಂಬರಿಗೆ ಬಂದು ಹೇಳಿದ್ದೇವೆ. ಕೆಲವು ಸಾರ್ವಜನಿಕ ಮಹತ್ವದ, ಹಗರಣದ ವಿಷಯಗಳಿರುತ್ತವೆ. ಅಂಥವನ್ನು ಅಜೆಂಡಾದಲ್ಲಿ ಸೇರಿಸಿದರೆ, ನಾವಲ್ಲಿ ಪ್ರಸ್ತಾಪಿಸಲು ಅನುಕೂಲವಾಗುತ್ತದೆ. ಕಾಲಿಂಗ್ ಅಟೆನ್‌ಷನ್ ವಿಷಯಗಳಿಗೂ ಸಾಕಷ್ಟಿವೆ.

ಅಧ್ಯಕ್ಷರು: ಅದಕ್ಕೋಸ್ಕರ ಇಂದು ಮೂರು ವಿಷಯಗಳನ್ನು ಹಾಕಿಕೊಂಡಿದ್ದೇನೆ. ರೂಲ್ಸ್ ಪ್ರಕಾರ ಎರಡು ವಿಷಯಗಳಿಗೆ ಮಾತ್ರ ಅವಕಾಶವಿದೆ. ಒಂದೊಂದು ಪಕ್ಷದವರಿಗೆ ಒಂದೊಂದು ವಿಷಯಕ್ಕೆ ಅವಕಾಶ ಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:ಇನ್ನುಳಿದಿರುವ ಮೂರು ದಿವಸಗಳ ಅಧಿವೇಶನದಲ್ಲಿ ನಮಗೆ ತಾವು ಹೆಚ್ಚಿನ ಅವಕಾಶ ಕೊಡಬೇಕು. ಆ ವಿಷಯಗಳನ್ನು ತಾವು ನಾಳೆ, ನಾಡಿದ್ದಿನ ಅಜೆಂಡಾದಲ್ಲಿ ಸೇರಿಸಬೇಕು.

ಅಧ್ಯಕ್ಷರು: ತಮಗೆ ನಿಯಮ 69ರಡಿಯಲ್ಲಿ ಮಾತನಾಡಲೂ ಅವಕಾಶ ಬೇಕು, ಬೇರೆ ಸಮಯದಲ್ಲಿಯೂ ಮಾತನಾಡಲು ಸಮಯ ಬೇಕು.

ಶ್ರೀ ಜಗದೀಶ್ ಶೆಟ್ಟರ್: ನಿಯಮ 69ರಡಿಯಲ್ಲಿ ಮಾತನಾಡುವಾಗ ನಾವು ನಾವೇ ಕಂಟ್ರೋಲ್ ಮಾಡಿಕೊಳ್ಳುತ್ತೇವೆ.

ಅಧ್ಯಕ್ಷರು: ಆ ರೀತಿ ಕಂಟ್ರೋಲ್ ಮಾಡಿಕೊಂಡು ಒಬ್ಬಿಬ್ಬರು ಮಾತನಾಡಿದರೆ ಆಗ ಸರಿ ಹೋಗುತ್ತದೆ.

ಶ್ರೀ ಎ.ರಾಮದಾಸ್(ಕೃಷ್ಣರಾಜ): ನಾನು 15 ದಿವಸಗಳಿಂದ ನಿರಂತರವಾಗಿ ನಿಮ್ಮ ಕಛೇರಿಗೆ ಬರುತ್ತಿದ್ದೇನೆ. 4 ಕಾಲಿಂಗ್ ಅಟೆನ್‌ಷನ್ಸ್ ಮತ್ತು ಒಂದು ನಿಯಮ 69ರ

ಅಡಿಯಲ್ಲಿ ಕೊಟ್ಟಿರುವ ವಿಷಯಗಳಿಗೆ ಸರ್ಕಾರದಿಂದ ಉತ್ತರ ಬಂದಿಲ್ಲ. ನಾನು ಆರ್ಕಿಯಾಲಜಿ ಡಿಪಾರ್ಟ್‌ಮೆಂಟ್ ಬಗ್ಗೆ, ಡೀ-ನೋಟಿಫಿಕೇಷನ್ ಬಗ್ಗೆ ಹೇಳಿದ್ದೆ. ಸರ್ಕಾರ ಉತ್ತರಿಸುವುದಿಲ್ಲ. ಹಾಗಾದರೆ, ನಾವು ಹೀಗೇ ಹೋಗಬೇಕೆ? ನಿಮ್ಮನ್ನು ಕೇಳಿದರೆ, ಸರ್ಕಾರದಿಂದ ಉತ್ತರ ಬಂದಿಲ್ಲ, ನಾನು ಹೇಗೆ ಹಾಕಲಿ ಎನ್ನುತ್ತೀರಿ? ಸರ್ಕಾರದಿಂದ ನಾಳೆವರೆಗೂ ಉತ್ತರ ಬರದಿದ್ದರೆ, ನಾವು ಹಾಗೆಯೇ ಹೋಗಬೇಕೆ?

ಶ್ರೀ ಜಗದೀಶ್ ಶೆಟ್ಟರ್: ದಿನಾಂಕವನ್ನು ನಿಗದಿಪಡಿಸಿ.

ಅಧ್ಯಕ್ಷರು: ನಮ್ಮ ರೂಲ್ಸ್ ಪ್ರಕಾರ ನಾನೇ ದಿನಾಂಕವನ್ನು ನಿಗದಿಪಡಿಸುವುದಕ್ಕೆ ನನಗೆ ಅಧಿಕಾರವಿದ್ದರೆ, ನಿಗದಿಪಡಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್: ತಮಗೆ ಅಧಿಕಾರವಿದೆ. ನಾಳೆ ತಾವು ನಿಗದಿಪಡಿಸಿ ಸರ್ಕಾರದವರು ಉತ್ತರಿಸುತ್ತಾರೆ.

ಶ್ರೀ ಎ.ರಾಮದಾಸ್: ನೀವು ಸರ್ಕಾರದಿಂದ ಉತ್ತರ ಬಂದಿಲ್ಲವೆಂದು ಹೇಳಬೇಕು.

ಅಧ್ಯಕ್ಷರು: ನಾನು ಸಂಬಂಧಪಟ್ಟ ಇಲಾಖೆಗೆ ಫೋನ್ ಮಾಡಿಸುತ್ತೇನೆ. ಬಂದಿದ್ದರೆ, ಹಾಕುತ್ತೇನೆ.

(ಗೊಂದಲ)

ಶ್ರೀ ಎ.ರಾಮದಾಸ್: ಹಾಗಾದರೆ, ಉತ್ತರ ಬರುವುದೇ ಇಲ್ಲ.

ಅಧ್ಯಕ್ಷರು: ರೂಲ್ಸ್ ಪ್ರಕಾರ ನನಗೆ ಅಧಿಕಾರವಿದ್ದರೆ ಹಾಕುತ್ತೇನೆಂದು ಹೇಳಿದ್ದೇನೆ.

ಶ್ರೀ ಆರಗ ಜ್ಞಾನೇಂದ್ರ: ಅವರು ಉತ್ತರ ಕೊಡುತ್ತಿಲ್ಲ.

ಅಧ್ಯಕ್ಷರು: ನನಗೆ ಸಂಬಂಧಪಟ್ಟದ್ದಕ್ಕೆ ನಾನು ಉತ್ತರ ಕೊಡುತ್ತಿದ್ದೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ನಿಯಮಗಳ ವ್ಯಾಪ್ತಿಯಲ್ಲಿ ಸದನವನ್ನು ನಡೆಸಬೇಕೆಂಬ ಒಟ್ಟಾರೆ ಅಭಿಪ್ರಾಯಕ್ಕೆ ನಾವು ಬಂದೆವು. ತಾವು ಹೇಳಿದ ಹಾಗೆ ಕಾಲಿಂಗ್ ಅಟೆನ್‌ಷನ್ ಅನ್ನು ಒಂದು ದಿವಸಕ್ಕೆ ಎರಡು ತೆಗೆದುಕೊಳ್ಳಬಹುದು. ಅವರು ಹೇಳಿದರೆಂದು ಹತ್ತು ವಿಷಯಗಳನ್ನು ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ಎಲ್ಲಾ ಒತ್ತಡದ ಮೇಲೆ ಸಭೆ ನಡೆಯುತ್ತದೆ. ರಾಮದಾಸ್‌ರವರು ಉತ್ತರ ಬಂದಿಲ್ಲ, ನೀವು ತೆಗೆದುಕೊಳ್ಳಬೇಕೆಂದು ಹೇಳುತ್ತಾರೆ. ಅಧ್ಯಕ್ಷರ ಪೀಠಕ್ಕೆ ಇಂಥ ಒತ್ತಡ ತರಬಾರದು. ನೀವು ನಿವೇದನೆ

ಮಾಡಿದ್ದೀರಿ. ಸರ್ಕಾರದಿಂದ ಯಾವುದಕ್ಕೆ ಉತ್ತರ ಕೊಡುವುದಕ್ಕೆ ಸಾಧ್ಯವೋ ಅದನ್ನೆಲ್ಲಾ ಕೊಟ್ಟಿದ್ದೇವೆ. ನಿರಾಳವಾಗಿ ಉತ್ತರ ಕೊಟ್ಟು ಸದನ ನಡೆಸಿದಂಥ ಇತಿಹಾಸವೇ ಇಲ್ಲ. ಆದರೂ, ಅವರಿಗೆ ಸಮಾಧಾನವಾಗಿಲ್ಲ. ಎಷ್ಟು ಸಾಧ್ಯವೋ ಅಷ್ಟು ಉತ್ತರಗಳನ್ನು ತರಿಸಿ ಕೊಡುವುದಕ್ಕೆ ನಾನು ಪ್ರಯತ್ನಿಸುತ್ತೇನೆ. ನಾವು ನಿಯಮಗಳ ವ್ಯಾಪ್ತಿಯಲ್ಲಿ ಕೆಲಸ ಮಾಡೋಣ.

ಶ್ರೀ ಎ.ರಾಮದಾಸ್: ನಾನು ಅಧ್ಯಕ್ಷ ಸ್ಥಾನಕ್ಕೆ ಅಗೌರವ ತರುತ್ತಿಲ್ಲ. ಅವರೇ ಹೇಳಿದ್ದಾರೆ. ಸರ್ಕಾರ ಉತ್ತರಿಸಲಿ.

ವಿಷಯ: ಆ) ಗೋಕಾಕ್ ಮಿಲ್ಸ್ ನೌಕರರ ರಕ್ಷಣೆ ಕುರಿತು.

+ ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು): ಗೋಕಾಕ್ ಕರದಂಟಿಗೆ ಪ್ರಸಿದ್ಧವಾಗಿದ್ದು, ಗೋಕಾಕ್ ಫಾಲ್ಸ್ ನೋಡಲು ವಿದೇಶಿಯರೂ ಸಹ ಬರುತ್ತಾರೆ. ಇವತ್ತು ಗೋಕಾಕ್ ಹೆಸರು ಕೇಳಿದರೆ, ಅದಕ್ಕೆ ಗೂಂಡಾಗಿರಿ, ದೌರ್ಜನ್ಯದ ತಾಲ್ಲೂಕು ಎನ್ನುವ ಹೆಸರಿದೆ. ಗೋಕಾಕ್ ಎಂದರೆ ಅದೊಂದು ಮಿನಿ ಬಿಹಾರ ಇದ್ದಹಾಗೆ ನಮ್ಮ ರಾಜ್ಯದಲ್ಲಿ ಗೋಕಾಕ್ ಮಿಲ್ಸ್ ನೂರು ವರ್ಷಗಳಷ್ಟು ಹಳೆಯದು. ಅಲ್ಲಿ ಸಾವಿರಾರು ಕಾರ್ಮಿಕರು ಕೆಲಸ ಮಾಡುತ್ತಾರೆ. ಇಂದು ಆ ಕಾರ್ಮಿಕರ ಮೇಲೆ ದಿನನಿತ್ಯ ದೌರ್ಜನ್ಯ ನಡೆಯುತ್ತಿದೆ. ಅವರ ಮೇಲೆ ಬೇರೆ ಬೇರೆ ರೀತಿಯ ಹಿಂಸಾಕೃತ್ಯಗಳು ನಡೆಯುತ್ತಿವೆ. ಅವರು ಶಾಂತ ರೀತಿಯಿಂದ ಕೆಲಸ ಮಾಡಲಾರದ ಪರಿಸ್ಥಿತಿ ಬಂದಿದೆ. ಈ ಕಡೆ ಯೂನಿಯನ್‌ನವರು, ಆ ಕಡೆ ಆಡಳಿತ ವರ್ಗದವರು ಈ ಕಾರ್ಮಿಕರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ. ನಾನು ಅಲ್ಲಿಗೆ ಎರಡು ಭಾರಿ ಭೇಟಿ ನೀಡಿದ್ದೆ. ಅಲ್ಲಿಯ ಪೋಲೀಸರು, ನೀವು ಒಳಗೆ ಹೋಗಬೇಡಿ, ಅದು ರಿಸ್ಟ್ರಿಕ್ಟೆಡ್ ಏರಿಯಾ ಎಂದು ಡಿಕ್ಲೇರ್ ಆಗಿದೆ, ಮಿಲ್‌ನವರ ಪರವಾನಗಿಯಿಲ್ಲದೆ, ಕ್ಯಾಬಿನೆಟ್ ಮಿನಿಸ್ಟರ್ ಆದರೂ, ಅಪೋಸಿಷನ್ ಲೀಡರ್ ಆದರೂ ಹೋಗುವ ಹಾಗಿಲ್ಲ, ಯಾರೂ ಹೋಗುವ ಆಗಿಲ್ಲವೆಂದರು. ನಾನು ಕಾರ್ಮಿಕರಿಗೆ ತೊಂದರೆಯಾಗಿದೆ ಹೋಗುತ್ತೇನೆ ಎಂದು ಹೇಳಿ, ಹೋಗಿದ್ದೆ. ಪೋಲೀಸ್ ಅಧಿಕಾರಿಗಳಿಗೆ, ಗೋಕಾಕ್ ಮಿಲ್ಸ್ ಆಡಳಿತ ವರ್ಗಕ್ಕೆ ಮತ್ತು ಅಲ್ಲಿನ ಯೂನಿಯನ್‌ಗೆ ಹೆದರುವ ಪರಿಸ್ಥಿತಿ ನಿರ್ಮಾಣವಾಗಿದೆ. ಈ ರೀತಿಯಾದರೆ ನನಗನ್ನಿಸುವ ಹಾಗೆ, ಅಲ್ಲಿ ಬಿಹಾರವನ್ನೂ ಮೀರಿಸುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇಂದು ಗೋಕಾಕ್ ಮಿಲ್ಸ್‌ನಲ್ಲಾಗಬಹುದು, ನಾಳೆ ಬೇರೆ ಬೇರೆ ಭಾಗದಲ್ಲಿ ಆ ರೀತಿ ಆಗಬಹುದು. ಈಗಾಗಲೇ 400-500 ಕಾರ್ಮಿಕರನ್ನು ಯಾವುದೇ ಕಾರಣವಿಲ್ಲದೆ ಸರ್ವಿಸ್‌ನಿಂದ ಟರ್ಮಿನೇಟ್ ಮಾಡಿದ್ದಾರೆ. ಅವರನ್ನು ಕೇಳಲಿಲ್ಲ,